

# ಬಂದ್ರೇ... ಬಂದ್ರೇ...

**ಶೃಂಗೇರಿ ಭಾಗದ ಕನ್ನಡವೇನೂ ಧಾರವಾಡ ಸೀಮೆಯ ಕನ್ನಡ, ಕುಂದಗನ್ನಡ ಅಥವಾ ಹವ್ಯಕ ಕನ್ನಡದಷ್ಟು ವಿಭಿನ್ನವಲ್ಲ. ಆದರೆ ಅದರದೇ ಆದ ವಿಶಿಷ್ಟ ರಾಗದಲ್ಲಿ ಕಿವಿ ಮೇಲೆ ಬಿದ್ದ ತಕ್ಷಣ ಇವರು ಶೃಂಗೇರಿ, ತೀರ್ಥಹಳ್ಳಿ ಕೊಪ್ಪದ ಕಡೆಯವರು ಎಂದು ಈ ಭಾಷೆ ಅರಿವಿದ್ದವರು ತಕ್ಷಣ ಕಂಡುಹಿಡಿದುಬಿಡಬಹುದು. ಚಿಕ್ಕಮಗಳೂರಿನ ಶೃಂಗೇರಿ ಭಾಗದ ಭಾಷೆಯ ಕಿರುಪರಿಚಯ ಮಾಡಿಕೊಟ್ಟಿದ್ದಾರೆ ಎಚ್.ಎಸ್. ನವೀನ ಕುಮಾರ್ ಹೊಸದುರ್ಗ**

ಕಾಲೇಜು ಸ್ನೇಹಿತರ ಒಡಗೂಡಿ ಶೃಂಗೇರಿ ಸಮೀಪದ ತೋರಣಗದ್ದೆಯ ನಮ್ಮ ಅಜ್ಜನ ಮನೆಗೆ ಹೋಗಿದ್ದೆವು. ನಾವು ಮನೆ ಮೆಟ್ಟಿಲು ಏರುತ್ತಿದ್ದಂತೆ ಎದುರಾದ ಅಜ್ಜ, ನನ್ನನ್ನು ಎಂದಿನಂತೆ ಬಿಗಿದಪ್ಪಿ ಸ್ವಾಗತಿಸಿ, ‘ಓ ಮಾಣಿ... ಬಂದ್ಯೇನಯ್ಯಾ, ಬಾ...ಬಾ... ನೀ ಬರ್ದೇ ಬಾಳ ದಿನಾ ಆತು ಅಂತ ನಾ ಎಣ್ತಿದ್ದೆ’ ಎಂದರು ಹಾಗೂ ನನ್ನ ಜೊತೆಗಿದ್ದ ಸ್ನೇಹಿತರಿಗೆ ‘ಬಂದ್ರೇ... ಬಂದ್ರೇ...’ ಎಂಬ ಸ್ವಾಗತ ಕೋರಿ ಅವರು ಮುಖ ಮುಖ ನೋಡಿಕೊಳ್ಳುವಂತೆ ಮಾಡಿದರು.

ಮನೆಯ ಮಾಳಿಗೆ ಒಳಗಿಂದ ಹೊರ ಬಂದ ನಮ್ಮ ದೊಡ್ಡಮ್ಮ ಅರ್ಥಾತ್ ಅಜ್ಜಿ (ನಮ್ಮ ಕಡೆ ಅಜ್ಜಿಗೆ ದೊಡ್ಡಮ್ಮ ಎನ್ನುತ್ತಾರೆ, ದೊಡ್ಡಪ್ಪನ ಹೆಂಡತಿಗೆ ಹಿರಿಯಮ್ಮ ಎಂಬ ಪದ ಬಳಸುತ್ತಾರೆ) ಸಹಾ ‘ಬಂದ್ರೇ... ಬಂದ್ರೇ...’ ಎಂದು ನನ್ನ ಸ್ನೇಹಿತರ ಗಲಿಬಿಲಿಯನ್ನು ಇನ್ನಷ್ಟು